ಶ್ರೀ ಪಿ.ಜಿ.ಆರ್. ಸಿಂಧ್ಯ : ಈಚೆಗೆ ಶಹಾಪುರ ತಾಲ್ಲೂಕಿನಿಂದ ಅಲ್ಲಿನ ಶಾಸಕರು ಮತ್ತು ಮುಖಂಡರು ಇಲ್ಲಿಗೆ ಬಂದು ತಮ್ಮನ್ನು, ಮುಖ್ಯಮಂತ್ರಿಗಳನ್ನೂ ಹಾಗೂ ನಮ್ಮನ್ನೂ ಕಂಡು ಹೋದರು. ಅದು ಒಂದು ಸರ್ಕಾರಿ ಆಜ್ಞೆ ನನಗೆ ತೋರಿಸಿದರು ಅದರಲ್ಲಿ ಉಪಸಮಿತಿ ವರದಿ ಕೊಡುವ ಮುಂಚೆಯೇ ಯಾದ್ಗೀರ್ ಒಂದು ಜಿಲ್ಲೆಯಾಗುವ ರೀತಿಯಲ್ಲಿ ಒಂದು ಆರ್ಡರನ್ನು ಹೊರಡಿಸಿ ಅದನ್ನು ವಿತ್‌ಡ್ರಾ ಮಾಡಿರುವುದು ನಿಜವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಸಬ್ ಕಮಿಟಿ ರಿಪೋರ್ಟ್ ಇನ್ನೂ ಫೈನಲೈಸಾಗಿಲ್ಲ. ಆದರೆ ಜಿಲ್ಲೆ ಮಾಡಬೇಕೆಂದರೆ ಅವಶ್ಯಕತೆಗಳು ಬೇಡಿಕೆಗಳು, ಸವಲತ್ತುಗಳು, ಸೌಲಭ್ಯಗಳನ್ನು ನಾವು ನೋಡಬೇಕಾಗುವುದು. ಇದು ಒಂದೇ ಕಡೆಯಿಂದಲ್ಲ ಇಡೀ ರಾಜ್ಯದಲ್ಲಿ ತಿರುಗಾಡಿ ಮಾಡಿದ್ದಾರೆ. ಯಾದ್ಗೀರ್ ಒಂದೇ ಪ್ರಶ್ನೆ ಅಲ್ಲ. ಶಹಾಪುರದವರು ನಮಗೂ ಮನವಿ ಪ್ರೆಸೆಂಟ್ ಮಾಡಿದ್ದಾರೆ. ಹುಂಡೇಕಾರ್ ಮತ್ತು ಗದ್ದಿಗೌಡರ ಕಮಿಟಿಗೂ ರೆಪ್ರೆಸೆಂಟ್ ಮಾಡಿದ್ದಾರೆ. ಸುರಪುರದವರೂ ಮಾಡಿದ್ದಾರೆ. ಒಂದೆ ತಾಲ್ಲೂಕಿನವರು ಮಾಡಿದರೆಂದು ಹೇಳಲು ಆಗುವುದಿಲ್ಲ. ಆದ್ದರಿಂದ ಇದನ್ನು ಸಮಗ್ರ ವಿಚಾರ ಮಾಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ ತಕ್ಷಣ ಯಾವ ತಾಲ್ಲೂಕು ಜಿಲ್ಲೆಯಾಗುತ್ತದೆಂದು ಹೇಳಲು ಬರುವುದಿಲ್ಲ.

ಮಹಿಳೆಯರಿಗಾಗಿ ಕೈಗಾರಿಕಾ ತರಬೇತಿ ಸಂಸ್ಥೆ

528 - ಶ್ರೀ ಎಸ್.ಆರ್. ಮೋರೆ (ಧಾರವಾಡ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಅನೇಕ ಜಿಲ್ಲಾ ಸ್ಥಳಗಳಲ್ಲಿ ಈಗಾಗಲೇ ಸರ್ಕಾರ ಐ.ಟಿ.ಐ.ಮಹಿಳಾ ಸಂಸ್ಥೆಗಳನ್ನು ಮಂಜೂರು ಮಾಡಿರುವುದೆ?*

ಆ) *ಧಾರವಾಡದಲ್ಲಿ ಸರ್ಕಾರಿ ಮಹಿಳಾ ಐ.ಟಿ.ಐ.ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಹಾಗಿದ್ದಲ್ಲಿ ಸರ್ಕಾರವು ಧಾರವಾಡದಲ್ಲಿ ಮಹಿಳಾ ಐ.ಟಿ.ಐ.ಸ್ಥಾಪಿಸುವ ಬಗ್ಗೆ ಕೈಗೊಂಡ ಕ್ರಮವೇನು?*

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ), ಕಾರ್ಮಿಕ ರಾಜ್ಯ ಸಚಿವರು

ಅ) ಹೌದು

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಆರ್. ಮೋರೆ : ಮಂತ್ರಿಗಳು ರಾಜ್ಯದ ಅನೇಕ ಜಿಲ್ಲಾಸ್ಥಳಗಳಲ್ಲಿ ಈಗಾಗಲೇ ಸರ್ಕಾರ ಐ.ಟಿ.ಐ. ಮಹಿಳಾ ಸಂಸ್ಥೆಗಳನ್ನು ಮಂಜೂರು ಮಾಡಿದೆ ಎಂದಿದ್ದಾರೆ, ಹಾಗೆ ಯಾವ್ಯಾವ ಜಿಲ್ಲೆಯಲ್ಲಿ ಮಾಡಿದ್ದೀರಿ? ಹಾಗೆಯೇ ಧಾರವಾಡದಲ್ಲಿ ಸರ್ಕಾರಿ ಮಹಿಳಾ ಐ.ಟಿ.ಐ.ಅವಶ್ಯಕತೆ ಇರವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದರೆ ಇಲ್ಲ ಎಂದಿದ್ದಾರೆ. ಮೂರು ತಿಂಗಳ ಹಿಂದೆ ನಾನು ಧಾರವಾಡದ ಮಹಿಳೆಯರ ಬೇಡಿಕೆಯನ್ನು ನನ್ನ ಪತ್ರಕ್ಕೆ ಲಗತ್ತಿಸಿ ಕೊಟ್ಟಿದ್ದೆ. ಹಿಂದೆ ಕೆ.ಹೆಚ್. ಪಾಟೀಲರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಮನವಿಯನ್ನು ಕೊಟ್ಟಿದ್ದೆ. ಅದರ ಬಗ್ಗೆ ತಾವು ಈಗ ಇಲ್ಲ ಎಂದು ಹೇಳಿದ್ದೀರಿ, ನನಗೆ ಇದರ ಬಗ್ಗೆ ಬಹಳ ಸಂಕೋಚ ಎನಿಸುತ್ತದೆ. ಇದರ ಬಗ್ಗೆ ತಾವು ಹೇಳಿಕೆಯನ್ನು ಕೊಡಬೇಕು.

ಶ್ರೀ ಸಿ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿಶ್ವಬ್ಯಾಂಕ್ ಸ್ಕೀಮ್‌ನಲ್ಲಿ ಬಂದದ್ದು 10 ಐ.ಟಿ.ಐ.ಗಳು. ಇರುವಂಥ ಶಾಸಕರಲ್ಲಿ ಕನಿಷ್ಟ ಪಕ್ಷ ಎಲ್ಲರೂ ಸೇರಿದರೆ

50 ಪರ್‌ಸೆಂಟ್ ಬೇಡಿಕೆಯನ್ನು ಐ.ಟಿ.ಐ.ಗಾಗಿ ಕೊಟ್ಟಿದ್ದಾರೆ. ಈಗ ಹತ್ತು ಐ.ಟಿ.ಐ.ಗಳು ಫೈನಲೈಜ್ ಆಗುವಂಥ ಸ್ಟೇಜ್‌ನಲ್ಲಿವೆ ನಾವು ಫೈನಲ್ ಮಾಡುವಂಥ ಸ್ಟೇಜ್‌ನಲ್ಲಿ ಗಣನೆಗೆ ತೆಗೆದುಕೊಂಡಿದ್ದೇವೆ. ಅವರು ಕೆಲವು ಗೈಡ್‌ಲೈನ್ಸ್‌ಗಳನ್ನು ಹಾಕಿದ್ದಾರೆ. ಅದರಲ್ಲಿ ಮೊದಲನೆಯದು, ಹತ್ತಿರದಲ್ಲಿ ಯಾವ ಐ.ಟಿ.ಐ.ಇರಬಾರದು ಎನ್ನುವುದು. ಎರಡನೆಯದು, ರೂರಲ್‌ಗೆ ಹೆಚ್ಚಿಗೆ ಉಪಯುಕ್ತವಾಗುವಂಥ ಐ.ಟಿ.ಐ. ಪ್ರಾರಂಭ ಮಾಡಬೇಕು ಎನ್ನತಕ್ಕಂಥದ್ದು, ಮತ್ತು ಅಲ್ಲಿ ಸ್ಥಳ ಪುಕ್ಕಟೆಯಾಗಿ ಸಿಗಬೇಕು ಅಥವಾ ಸರ್ಕಾರ ಅದನ್ನು ಒದಗಿಸಿಕೊಡಬೇಕು ಎಂದು ಕೆಲವು ಕಂಡೀಷನ್ಸ್ ಇವೆ. ಇದನ್ನೆಲ್ಲಾ ನೋಡಿದಮೇಲೆ ನಾವು ಹತ್ತು ಐ.ಟಿ.ಐ.ಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಈಗ ಹತ್ತು ಯಾವುವೆಂದರೆ ಗುಂಡ್ಲುಪೇಟೆಗೆ ಕೊಡಲಾಗಿದೆ ಗದಗಿಗೆ ಕೊಡಲಾಗಿದೆ, ಬೆಂಗಳೂರಿಗೆ ಕೊಡಲಾಗಿದೆ, ಕೋಲಾರಕ್ಕೆ ಕೊಡಲಾಗಿದೆ, ನಲವತ್ತವಾಡಕ್ಕೆ ಕೊಡಗಲಾಗಿದೆ, ಚನ್ನರಾಯಪಟ್ಟಣಕ್ಕೆ ಕೊಡಲಾಗಿದೆ, ಪುತ್ತೂರಿಗೆ ಕೊಡಲಾಗಿದೆ ಚಿತ್ರದುರ್ಗಕ್ಕೆ ಕೊಡಲಾಗಿದೆ, ಬಾಗಲಕೋಟೆಗೆ ಕೊಡಲಾಗಿದೆ. ತಿಪಟೂರಿಗೆ ಕೊಡಲಾಗಿದೆ. ಈಗಾಗಲೇ ನಾನು ಉತ್ತರ ಕೊಟ್ಟಂತೆ ಕೊಡುವಂಥ ಸಾಧ್ಯತೆಗಳು ಬೇರೆ ಕಡೆ ಇಲ್ಲ ಎನ್ನುವುದನ್ನು ಹೇಳಿದೆ. ಹತ್ತು ಐ.ಟಿ.ಐ.ಗಳನ್ನು ಯಾವ ರೀತಿಯಾಗಿ ಕೊಡಬೇಕು ಎನ್ನತಕ್ಕಂಥ ಗೈಡ್‌ಲೈನ್ಸ್ ಇದೆ ಎಂದು ಹೇಳಿದ್ದೇನೆ. ಇದನ್ನೆಲ್ಲಾ ನೋಡಿಕೊಂಡು ಎಲ್ಲಿ ಕೊಡಬೇಕು ಎನ್ನುವುದು ಗಣನೆಗೆ ತೆಗೆದುಕೊಂಡು ಮಾಡಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ಗ್ರಾಮಾಂತರ ಪ್ರದೇಶಗಳ ಕಡೆಗೆ ಒಂದನ್ನೂ ಕೂಡ ಕೊಟ್ಟಿಲ್ಲ. ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಟ್ಟರೆ ಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೂಡ ಕೊಟ್ಟಿದ್ದಾರೆ.

ಶ್ರೀ ಸಿ.ಎಸ್.ನಾಡಗೌಡ : ಮಾನ್ಯ ಅಧ್ಯಕ್ಷರೇ, ನಲವತ್ತವಾಡ ಎನ್ನುವುದು ಗ್ರಾಮಾಂತರ ಪ್ರದೇಶ. ತಮಗೆ ಕೂಡ ಅದು ಗೊತ್ತಿದೆ.

ಅಧ್ಯಕ್ಷರು : ಎಂಟರಲ್ಲಿ ಒಂದನ್ನು ಗ್ರಾಮಾಂತರ ಪ್ರದೇಶಕ್ಕೆ ಕೊಟ್ಟಿದ್ದೀರಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ ಮಂತ್ರಿಗಳು ದಯವಿಟ್ಟು ಯಾರು ತಪ್ಪಾಗಿ ಭಾವಿಸಬಾರದು. ಯಾರು ಯಾರ್ಯು ಮಂತ್ರಿಗಳಾಗುತ್ತಾರೆ, ಅವರವರ ಊರಿಗೆ ಒಂದೊಂದು ಐಟಿಐಯನ್ನು ತೆಗೆದುಕೊಂಡು ಹೋಗುತ್ತಾರೆ. ನಮ್ಮ ಕಡೆಗೂ ಲಕ್ಷ್ಯ ಇಲ್ಲ, ತಮ್ಮ ಕಡೆಗೂ ಲಕ್ಷ್ಯ ಇಲ್ಲ. ಆ ತರಹ ಆಗಬಾರದು. ಮಾನ್ಯ ಕೆ.ಹೆಚ್.ಪಾಟೀಲರು ಇದ್ದಾಗ ಅವರ ಊರಿಗೆ ಒಂದು ಐಟಿಐಯನ್ನು ಮಾಡಿಕೊಂಡರು. ಈಗ ನಾಡಗೌಡರು ಇದ್ದಾರೆ, ಅವರ ಊರಿಗೆ ಒಂದು ಐಟಿಐಯನ್ನು ಮಾಡಿಕೊಂಡರು. ಮಲ್ಲಾರಿಗೌಡರಿಗೆ ಯಾವಾಗ ಕೊಡುತ್ತೀರಿ ಎಂದು ಮಾನ್ಯ ಕೆ.ಹೆಚ್.ಪಾಟೀಲರೇ ಇದಕ್ಕೆ ಉತ್ತರ ಹೇಳಬೇಕು.

ಅಧ್ಯಕ್ಷರು : ಏನು ಹೇಳಿದಿರಿ ಪಾಟೀಲರೇ, ನನ್ನ ಕಡೆಗೂ ಲಕ್ಷ್ಯ ಇಲ್ಲ, ನಿಮ್ಮ ಕಡೆಗೂ ಲಕ್ಷ್ಯ ಇಲ್ಲ ಎಂದು ಹೇಳುತ್ತೀರಿ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ಹೌದು ಅಧ್ಯಕ್ಷರೇ, ನನ್ನ ಕಡೆಗೂ ಲಕ್ಷ್ಯ ಇಲ್ಲ, ತಮ್ಮ ಕಡೆಗೂ ಇಲ್ಲ, ನಾನು ಕೆ.ಹೆಚ್. ಪಾಟೀಲರಲ್ಲಿ ಹಿಂದೆ ವಿನಂತಿ ಮಾಡಿದಾಗ ಮಲ್ಲಾರಿಗೌಡರೇ ನಿಮಗೆ ಕೊಡುತ್ತೇನೆ ಎಂದು ಒಂದು ಭರವಸೆಯನ್ನು ಕೂಡಾ ಕೊಟ್ಟರು. ಈಗ ನಾಡಗೌಡರು ಬಂದು ಅವರ ಊರಿಗೆ ಒಂದು ಮಾಡಿಕೊಂಡು ಹೋದರು. ನಮಗೂ ನಿಮಗೂ ಯಾವಾಗ ಕೊಡುತ್ತಾರೆನ್ನುವುದನ್ನು ಕೆ.ಹೆಚ್. ಪಾಟೀಲರು ಹೇಳಬೇಕು.

SRI A.S. NADAGOWDA : Sir, When a new proposal for establishing new ITI's comes forward, We will consider,

ಅಧ್ಯಕ್ಷರು : ಆಗ ನನ್ನದನ್ನು ಮತ್ತು ಅವರನ್ನು ಇಬ್ಬರದನ್ನೂ ಕನ್ಸಿಡರ್ ಮಾಡುತ್ತೀರಾ?

ಶ್ರೀ ಸಿ.ಎಸ್. ನಾಡಗೌಡ : ಆಗಲಿ.

ಶ್ರೀ ಎಂ. ಮುನಿಸ್ವಾಮಿ : ಮಾನ್ಯ ಮಂತ್ರಿಗಳು ಬೆಂಗಳೂರಿಗೆ ಒಂದು ಐಟಿಐಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಕೆ.ಹೆಚ್.ಪಾಟೀಲರು ಮಂತ್ರಿಗಳಾಗಿದ್ದಾಗ ಬೆಂಗಳೂರಿನಲ್ಲಿ ಸಿವಿಲ್ ಏರಿಯಾಗೆ ಒಂದನ್ನು ಕೊಡುತ್ತೇವೆ ಎನ್ನತಕ್ಕಂಥ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ಏನಾದರೂ ಇನ್‌ಕ್ಲೂಡ್ ಮಾಡಿದ್ದೀರಾ?

ಶ್ರೀ ಎ.ಎಸ್.ನಾಡಗೌಡ : ತಾವು ಸರಿಯಾಗಿ ಕೇಳಲಿಲ್ಲ. ಇದರಲ್ಲಿ ಬೆಂಗಳೂರು ಕೂಡಾ ಸೇರಿದೆ.

ಶ್ರೀ ಎಂ. ಮುನಿಸ್ವಾಮಿ : ಬೆಂಗಳೂರಿನಲ್ಲಿ ಯಾವ ಸ್ಥಳದಲ್ಲಿ ಇದೆ ಎಂದು ಹೇಳಬೇಕು. ನಮ್ಮದ್ದು ನಾರ್ತ್ ಕಾನ್‌ಸ್ಟಿಟ್ಯೂಯೆನ್ಸಿ ಆಗಿರುವುದರಿಂದ ನಮಗೆ ತೊಂದರೆಯಾಗಿದೆ, ಅದನ್ನು ಏನಾದರೂ ತಾವು ಇನ್‌ಕ್ಲೂಡ್ ಮಾಡಿದ್ದೀರಾ? ಮತ್ತು ಬೆಂಗಳೂರಿನಲ್ಲಿ ಯಾವ ಸ್ಥಳದಲ್ಲಿ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : ಅದರಲ್ಲಿ ಶಾಂತಿನಗರ ಸೇರಿದೆಯೇ?

ಶ್ರೀ ಎಂ. ಮುನಿಸ್ವಾಮಿ : ಶಾಂತಿನಗರ, ಶಿವಾಜಿನಗರ ಸೇರಿ ಒಂದು ಐಟಿಐ ಆಗಬೇಕು ಎಂದು ನಾನು ಮಾನ್ಯ ಮಂತ್ರಿಗಳಿಗೆ ಕಾಗದವನ್ನು ಬರೆದಿದ್ದು. ಅದರ ವಿಚಾರವನ್ನು ಕೇಳುತ್ತಿದ್ದೇನೆ.

ಶ್ರೀ ಸಿ.ಎಸ್. ನಾಡಗೌಡ : ಈಗಾಗಲೇ ನಾನು ಅದಕ್ಕೆ ಕೆಲವೊಂದು ಕ್ರೈಟೀರಿಯಾಗಳು ಇದೆ ಎಂದು ಹೇಳಿದ್ದೇನೆ. ಹಳ್ಳಿಯ ಜನರಿಗೆ ಅನುಕೂಲವಾಗುವಂಥ ಸ್ಥಳ ಮತ್ತು ಅಲ್ಲಿ ಪುಕ್ಕಟೆಯಾಗಿ ಯಾರಾದರೂ ಸ್ಥಳವನ್ನು ಕೊಟ್ಟರೆ ನಮಗೆ ಬಹಳ ಅನುಕೂಲವಾಗುತ್ತದೆ. ಅವೆಲ್ಲವನ್ನೂ ಇಟ್ಟು ಕೊಂಡಿದ್ದೇವೆ. ಬೆಂಗಳೂರಿಗೆ ಒಂದು ಎಂದು ಅಲಾಟ್‌ಮೆಂಟ್‌ನ್ನು ಹಾಕಿದ್ದೇವೆ. ಬೆಂಗಳೂರಿನಲ್ಲಿ ಎಲ್ಲಿ ಕೊಡಬೇಕು ಎಂದು ಫೈನಲ್ ಆಗಿ ಡಿಸೈಡ್ ಮಾಡುತ್ತೇವೆ.

ಶ್ರೀ ಎಂ. ಮುನಿಸ್ವಾಮಿ : ನಾವು ಕಾರ್ಪೊರೇಷನ್ ಮುಖಾಂತರ ಎರಡೂವರೆ ಎಕರೆ ಜಮೀನನ್ನು ಐ.ಟಿ.ಐ. ಯನ್ನು ಪ್ರಾರಂಭ ಮಾಡುವುದಕ್ಕೆ ಕೊಟ್ಟಿದ್ದೇವೆ. ಇದನ್ನು ದಯಮಾಡಿ ಪರಿಶೀಲನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮಹಿಳಾ ಐಟಿಐಯನ್ನು ತೆರೆಯಬೇಕು ಎಂದು ಹೇಳಿ ಅನೇಕ ವರ್ಷಗಳಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಅನುಕೂಲವಾದಂಥ ವಾತಾವರಣ ಕಲ್ಪಿಸಿಕೊಡುವಂಥ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯ ಇದೆ. 30 ಪರ್‌ಸೆಂಟ್ ಹೆಣ್ಣು ಮಕ್ಕಳಿಗೆ ಟಿಕ್ಕಿಕಲ್ ಎಜುಕೇಷನ್‌ನ್ನು ಕೊಡಬೇಕು ಎಂದು ಈಗಾಗಲೇ ನಾವು ನಿರ್ಧಾರವನ್ನು ಕೂಡಾ ಮಾಡಿಕೊಂಡಿದ್ದೇವೆ. ಹುಬ್ಬಳ್ಳಿ-ಧಾರವಾಡದಲ್ಲಿರುವ ರೂರಲ್ ಎಂದು ಪಡೆದು ಕೊಳ್ಳಬೇಕು. ನಾಲ್ಕು ಜಿಲ್ಲೆಯಾವರೂ ಧಾರವಾಡ ಜಿಲ್ಲೆಯವರೂ ಎಲ್ಲಾ ಜನರು ಅಲ್ಲಿ ಬರುತ್ತಾರೆ. ಈಗ ಅಲ್ಲಿ ಗಂಡು ಮಕ್ಕಳ ಒಂದು ಐಟಿಐ ಇದೆ. ಬಿಲ್ಡಿಂಗ್ ಇದೆ. ಅದಕ್ಕೆಲ್ಲ ಎಕ್ವಿಪ್‌ಮೆಂಟ್ಸ್,ಮಿಷನೆರೀಸ್ ಎಲ್ಲ

ಇದೆ. ಕೇವಲ ಕ್ಲಾಸ್ ರೂಮಿನಲ್ಲಿ ಕ್ಲಾಸನ್ನು ತೆಗೆದರೆ ಅದು ಸರಳ ಆಗುತ್ತದೆ. ಅದನ್ನು ಏಕೆ ವಿಚಾರ ಮಾಡಬಾರದು.

ಅಧ್ಯಕ್ಷರು : ಅದನ್ನು ವಿಚಾರ ಮಾಡುತ್ತಾರೆ.

ತೋಟಗಾರಿಕೆ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ

364 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಲು ಸರ್ಕಾರದ ಉದ್ದೇಶವಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ನಿಗಮವನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಗುವುದು ಮತ್ತು ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ರಾಜ್ಯ ಸರ್ಕಾರ ವಿಶ್ವಬ್ಯಾಂಕು ಹಾಗೂ ವಿದೇಶ ಹಣಕಾಸಿನ ಸಂಸ್ಥೆಗಳಿಂದ ಎಂಟನೆ ಯೋಜನೆಯ ಅವಧಿಯಲ್ಲಿ ತೋಟಗಾರಿಕೆ ಕ್ಷೇತ್ರದ ಉತ್ಪಾದನೆಗೆ ಹೆಚ್ಚಿನ ಮಹತ್ವ ನೀಡುವ ಸಲುವಾಗಿ ಹಣಕಾಸು ನೆರವನ್ನು ಪಡೆಯಲು ರೂಪಿಸಿರುವ ಆರು ಯೋಜನೆಗಳು ಯಾವುವು?

ಈ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಸರ್ಕಾರದ 8ನೇ ಯೋಜನೆಯ ಅವಧಿಯಲ್ಲಿ ಯಾವುದಾದರೂ ಯೋಜನೆಯನ್ನು ರೂಪಿಸಲಾಗಿದೆಯೇ?

ಉ) ಹಾಗಿದ್ದಲ್ಲಿ ಅಂತಹ ಯೋಜನೆ ಯಾವುದು? (ಅದರ ಪೂರ್ಣ ವಿವರ ನೀಡುವುದು)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಕೆಳಕಂಡ ವಿಶೇಷ ಯೋಜನೆಗಳು ಮಾತ್ರ ಪರಿಶೀಲನೆಯಲ್ಲಿವೆ :

1) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ
2) ತೆಂಗು ಅಭಿವೃದ್ಧಿ ಯೋಜನೆ
3) ಸಮಗ್ರ ಮಾವು ಅಭಿವೃದ್ಧಿ ಯೋಜನೆ
4) ಲಾಲ್‌ಬಾಗ್‌ನಲ್ಲಿ ಸಮಗ್ರ ಪುಷ್ಪಾಭಿವೃದ್ಧಿ ಯೋಜನೆ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮೊದಲನೆ ಪ್ರಶ್ನೆಯಲ್ಲಿ ರಾಜ್ಯದಲ್ಲಿ ತೋಟಗಾರಿಕೆ ಪ್ರತ್ಯೇಕ ನಿಗಮ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಎರಡನೆ ಪ್ರಶ್ನೆಗೆ ಉತ್ತರವಾಗಿ ಕೆಳಕಂಡ ವಿಶೇಷ ಯೋಜನೆಗಳು ಮಾತ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ ತೆಗೆದುಕೊಳ್ಳುತ್ತೇವೆ ಅಂದಾಗ ಒಂದು ನಿಗಮ ಪ್ರತ್ಯೇಕವಾಗಿ ಮಾಡಿದ್ದರೆ ಚೆನ್ನಾಗಿರುತ್ತದೆಂದು ಹೇಳುತ್ತೇನೆ. ಮೊದಲು ಪ್ರತ್ಯೇಕ ನಿಗಮ ಮಾಡುತ್ತೇವೆ ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಅದು ನಿಜವೇ? ಈಗ ಏನಾದರೂ ಮಾಡುವುದಕ್ಕೆ ಸಾಧ್ಯವಿದ್ದರೆ ದಯವಿಟ್ಟು ಅದನ್ನು ಮಾಡಿದರೆ ಒಳ್ಳೆಯದು, ಇದು ಬಹಳ ಮಹತ್ವವಾದದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಧ್ಯದಲ್ಲಿ ಆ ಪ್ರಪೋಸಲ್ ಇಲ್ಲ. ಆದರೆ ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕು. ಏಕೆಂದರೆ, ಇವೆಲ್ಲಾ